ಧನು ಎಂಬವಳು ಮಾನವ ಬಾಂಬಾಗಿ ರಾಜೀವ ಗಾಂಧಿಯನ್ನು ಉಡಾಯಿಸಿಬಿಟ್ಟಳು.''

ಡಾ. ಸೋನಿಪತ್ ನಿಡಿದಾದ ಉಸಿರು ಬಿಟ್ಟರು. "ಈಫ್ ಯೂ ಡೋಂಟ್ ಮೈಂಡ್" ಎನ್ನುತ್ತಾ ಎರಡೂ ಕಾಲುಗಳನ್ನು ಟೀಪಾಯಿ ಮೇಲೆ ಉದ್ದಕ್ಕೆ ಚಾಚಿದರು. ಎರಡು ದಮ್ಮು ಸಿಗಾರ್ ಎಳೆದರು. ನಾನೂ ವಿಷಾದದ ಭಾವದಲ್ಲಿದ್ದೆ.

"ಇಷ್ಟಾದ ಮೇಲೆ ನನಗೆ ಭ್ರಮನಿರಸನವಾಯಿತು. ಜಡ್ಡು ಹಿಡಿದ ನಮ್ಮ ವ್ಯವಸ್ಥೆ ಇಬ್ಬರು ಪ್ರಧಾನಿಗಳನ್ನು ಬಲಿ ತೆಗೆದುಕೊಂಡಿತ್ತು. ನಾನು ಪ್ರಾಣಾಪಾಯವನ್ನು ಲೆಕ್ಕಿಸದೆ ಮಾಡಿದ ಕೆಲಸಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ಆದರೆ, ಲಂಡನ್ ಗುರುದ್ವಾರದ ಆಡಳಿತ ವರ್ಗಕ್ಕೆ ಮತ್ತು ತಮಿಳು ಈಳಂ ಹೋರಾಟಗಾರರಿಗೆ ನನ್ನ ಮೇಲೊಂದು ಸಂದೇಹ ಬಂದಿತ್ತು. ಒಂಟಿಗಾಲಿನ ಆ ತಮಿಳು ಹೋರಾಟಗಾರ ಆ ಸಣ್ಣ ಪಿಸ್ತೂಲಿನಿಂದ ನನ್ನನ್ನು ಉಡಾಯಿಸಬಹುದು ಎಂದು ಭಯವಾಗತೊಡಗಿತು. ನಾನು ಲಂಡನ್ ಬಿಟ್ಟು ಇಂಡಿಯಾಕ್ಕೆ ಬಂದು ಬಿಟ್ಟೆ. ಸ್ವಲ್ಪ ನೀರು ಕೊಡು. ಗಂಟಲು ಕಟ್ಟುತ್ತಿದೆ."

ನಾನು ನೀರು ತಂದು ಕೊಟ್ಟೆ. ಎರಡು ಲೋಟ ನೀರು ಕುಡಿದು ಡಾ. ಸೋನಿಪತ್ ಮುಂದುವರಿಸಿದರು.

"ಇಂಡಿಯಾಕ್ಕೆ ಬಂದವನು ನೇರ ಹರಿಯಾಣದ ಸೋನಿಪತ್‌ಗೆ ಹೋದೆ. ಅಲ್ಲಿ ನನ್ನ ಹಿರಿಯರು ಯಾರೂ ಬದುಕಿ ಉಳಿದಿರಲಿಲ್ಲ. ಕಿರಿಯರಿಗೆ ನನ್ನ ಗುರುತಿರಲಿಲ್ಲ. ಈ ಮುದಿ ಪ್ರಾಯದವ ನಮಗೆ ಹೊರೆಯಾಗಲು ಬಂದು ಬಿಟ್ಟನಲ್ಲಾ ಎಂಬ ಭಾವವನ್ನು ಅವರ ಮುಖಗಳಲ್ಲಿ ಕಂಡೆ. ಹರಿಯಾಣದಲ್ಲಿ ಜಾಟರ ಆರ್ಭಟ ಜೋರಾಗಿತ್ತು. ಪಂಜಾಬಿಗೆ ಹೋದರೆ ಸಿಖ್ಖರ ಆರ್ಭಟ. ನಾರ್ತ್ ಇಂಡಿಯಾ ಬೇಡ. ಸೌತ್ ಇಂಡಿಯಾದಲ್ಲಿ ಮೈಸೂರು ಹಿತಕರ ಹವಾಮಾನದ ಸಾಂಸ್ಕೃತಿಕ ನಗರಿ ಎಂಬ ವಿಷಯ ಟೂರಿಸಂ ಡಿಪಾರ್ಟ್‌ಮೆಂಟ್‌ನಿಂದ ಗೊತ್ತಾಯಿತು. ಮೈಸೂರಿನಲ್ಲಿ ನನಗೆ ಈಗಿನ ಹೆಂಡತಿಯ ಪರಿಚಯವಾಯ್ತು. ಐದು ಮಕ್ಕಳ ವಿಧವೆ! ನನ್ನಿಂದ ಆ ಕುಟುಂಬ ಸುಖವಾಗಿ ಬದುಕು ಸಾಗಿಸುವಂತಾಗಲಿ ಎಂದು ಅವಳ ಕೈ ಹಿಡಿದೆ. ಎಲ್ಲಾದರೂ ಶಾಶ್ವತವಾಗಿ ನೆಲೆ ನಿಲ್ಲುವ ಎಂದು ಇಲ್ಲಿಗೆ ಬಂದು ಆ ಮನೆಯನ್ನು ಕೊಂಡುಕೊಂಡೆ. ಈಗ ತಪ್ಪು ಮಾಡಿದೆನೆ ಅನಿಸತೊಡಗಿದೆ."

"ಯಾಕ್ಸಾರ್? ನೀವೀಗ ಸುಖವಾಗಿಲ್ವಾ?"

"ಸುಖವಾಗಿ ಬದುಕೋದಿಕ್ಕೆ ನನ್ನ ಪೆನ್‌ಶನ್ ಸಾಲುತ್ತಿಲ್ಲ. ಅದಕ್ಕೆ ನಿನ್ನಲ್ಲಿಗೆ ಬಂದೆ. ನಿನ್ನಿಂದ ನನಗೊಂದು ಸಹಾಯವಾಗಬೇಕು."

ನಾನು ಬೆವತು ಹೋದೆ. ಈ ಮುದುಕಪ್ಪ ನನ್ನಿಂದ ಸಾಲ ಕೇಳಲು ಹಳೆಯ ಕತೆಗಳನ್ನು ಹೇಳಿರಬೇಕು ಎಂದು ಖಾತ್ರಿಯಾಯಿತು. ನನ್ನ ದನಿಯ ನಡುಕ ತೋರಗೊಡದಂತೆ ನಾನಂದೆ: "ತಿಂಗಳ ಸಂಬಳದಲ್ಲಿ ಬದುಕುವ ಬಡ ಮೇಸ್ಟ್ರು ನಾನು. ನನ್ನಿಂದ ನಿಮಗೆ ಏನು ಸಹಾಯವಾದೀತು?"

"ಹೆದರಬೇಡ. ನಾನು ಇದುವರೆಗೆ ಯಾರಲ್ಲೂ ಸಾಲ ಕೇಳಿದವನಲ್ಲ. ನನಗೆ ಬ್ರಿಟಿಷ್ ಕಸ್ಟಮ್ಸ್ ಡಿಪಾರ್ಟ್‌ಮೆಂಟ್‌ನಿಂದ ಒಂಬತ್ತು ಮಿಲಿಯನ್ ಪೌಂಡು ಕಾಂಪನ್‌ಸೇಷನ್ ಬರಬೇಕಾಗಿದೆ. ನಿನ್ನ ಪ್ರಯತ್ನದಿಂದ ಅಷ್ಟು ಬಂದರೆ ಅರ್ಧಾಂಶ ನಿನಗೆ ಕೊಟ್ಟು ಬಿಡುತ್ತೇನೆ. ಪ್ರಾಮಿಸ್."

ನನಗೆ ಉಸಿರು ಸಿಕ್ಕಿ ಹಾಕಿಕೊಂಡಂತಾಯಿತು. ಒಂಬತ್ತು ಮಿಲಿಯನ್ ಪೌಂಡು ಅಂದರೆ ಅರವತ್ತು ಕೋಟಿಗಿಂತಲೂ ಅಧಿಕ. ಅದರ ಅರ್ಧಾಂಶವೆಂದರೆ ಮೂವತ್ತು ಕೋಟಿ ದಾಟುತ್ತದೆ! ಕಳೆದ ಮೂವತ್ತು ವರ್ಷಗಳಿಂದ ದುಡಿಯುತ್ತಿದ್ದೇನೆ. ನನ್ನ ಉಳಿತಾಯ ಮೂವತ್ತು ಲಕ್ಷ ಬಿಡಿ, ಮೂರು ಲಕ್ಷವನ್ನೂ ದಾಟಿಲ್ಲ. ಈಗ ಭಾಗ್ಯಲಕ್ಷ್ಮಿ ಮನೆಗೆ ಬರುವುದರಲ್ಲಿದ್ದಾಳೆ. ನಾನು ಆತುರಾತುರವಾಗಿ ಕೇಳಿದೆ.